| | | |
|---|---|---|
| ಓ ಎಸ್ | 96/2017 | ಡಿ .ಡಬ್ಲ್ಯೂ: 1 |

ಇಂದು ದಿಃ /2020 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ವಾದಿಪರ ಶ್ರೀ ಕೆ ಐ ಬಿ ವಕೀಲರಿಂದಃ

ನನಗೆ ಕನ್ನಡದಲ್ಲಿ ಸಹಿ ಮಾಡಲು ಬರುತ್ತದೆ , ಓದಲು ಗೊತ್ತಿಲ್ಲ. 2 ನೇ ಪ್ರತಿವಾದಿ ನನ್ನ ಹೆಂಡತಿ , ಹೆಬ್ಬೆಟ್ಟಿನ ಗುರುತು ಹಾಕುತ್ತಾರೆ. ನನಗೆ 4 ನೇ ಪ್ರತಿವಾದಿ ಸಿದ್ದರಾಜು ರವರ ಪರಿಚಯವಿದೆ.

ದಿಃ28/2/2017 ರಂದು ನಿ ಪಿ 6 ರಂತೆ ವಾದಿ ನನಗೆ ನೋಟೀಸ್ ಕಳುಹಿಸಿದ್ದರು ಎಂದರೆ ಸರಿ . ನೊಟೀಸನ್ನು ನಾನು ಮತ್ತು ನನ್ನ ಹೆಂಡತಿ ಪಡೆದುಕೊಂಡಿದ್ದೇವೆ ಎಂದರೆ ಸರಿ . ಆ ನೋಟೀಸಿಗೆ ನಾವು ಯಾವುದೇ ರೀತಿಯ ಉತ್ತರ ಕೊಟ್ಟಿಲ್ಲ. ಈ ದಾವೆಯನ್ನು ಯಾವ ಸ್ವತ್ತಿಗೆ ಸಂಬಂಧಪಟ್ಟಂತೆ ಹಾಕಿದೆ ಎಂದು ನನಗೆ ಗೊತ್ತಿದೆ. ದಾವಾ ಸ್ವತ್ತು ದಿಃ25/11/1957 ರ ನೋಂದಾಯಿತ ವಿಭಗ ಪತ್ರದ ಮೂಲಕ ವಾದಿಯ ತಂದೆಗೆ ಬಂದಿತ್ತು ಎಂದರೆ ಸರಿಯಲ್ಲ. ದಿಃ 25/11/1957 ರ ವಿಭಾಗ ಪತ್ರದ ನಕಲನ್ನು ನಾನು ಪಡೆದುಕೊಂಡು ಪರಿಶೀಲಿಸಿದ್ದೇನೆ. ಸಾಕ್ಷಿಯು ಪುನಃ ನಾನು ಓದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ನಾನು ಓದಿಸಿ ತಿಳಿದುಕೊಂಡಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಭಾಗಪತ್ರದ ಮೂಲಕ ಶಿವಸ್ವಾ ಮಿ ರವರಿಗೆ ನಂಜನಗೂಡು ತಾಲ್ಲೂಕಿನ ದೊಡ್ಡಕವಲಂದೆ ಹೋಬಳಿ ಕಕ್ಕರಹಟ್ಟಿ ಗ್ರಾಮದಾ ಸ ನಂ. 8 ರಲ್ಲಿ 7 ಎಕರೆ 34 ಗುಂಟೆ , ಸ ನಂ.9 ರಲ್ಲಿ 6 ಎಕರೆ 33 ಗುಂಟೆ , ಸ ನಂ.267 ರಲ್ಲಿ 3 ಎಕರೆ 34 ಗುಂಟೆ ನೀಡಲಾಗಿತ್ತು ಎಂದರೆ ಸರಿಯಲ್ಲ. ನನ್ನ ಹುಟ್ಟಿದ ವರ್ಷ ಜ್ಞಾಪಕವಿಲ್ಲ. ಈಗ ನನಗೆ ಅಂದಾಜು 42 ವರ್ಷ ವಯಸ್ಸು. ನನಗೂ ನನ್ನ ಅಣ್ಣ ಶಿವಸ್ವಾ ಮಿರವರಿಗೂ 10 ವರ್ಷ ವಯಸ್ಸಿನ ಅಂತರವಿದೆ. ಶಿವಸ್ವಾ ಮಿ ರವರ ಜೀವಿತ ಕಾಲದಲ್ಲಿ ಮೇಲೆ ಹೇಳಿದ 3 ಸ ನಂ. ಜಮೀನುಗಳನ್ನು ಶಿವಸ್ವಾ ಮಿ ರವರು ಅನುಭವಿಸುತ್ತಿದ್ದರು ಎಂದರೆಸ ರಿಯಲ್ಲ. ಸಾಕ್ಷಿಯು ಮುಂದುವರಿದು ಸ ನಂ.8 ರ ಜಮೀನಿನಲ್ಲಿ ನಾನು ವ್ಯವಸಾಯ ಮಾಡುತ್ತಿದ್ದೆ ಹಾಗು ಉಳಿದ ಎರಡು ಸ ನಂ. ಜಮೀನುಗಳಲ್ಲಿ ಶಿವಸ್ವಾ ಮಿರವರು ವ್ಯವಸಾಯ ಮಾಡುತ್ತಿದ್ದರು

ಎಂದು ನುಡಿಯುತ್ತಾರೆ. ಶಿವಸ್ವಾ ಮಿರವರು 1994 ರಲ್ಲಿ ಮರಣಹೊಂದಿರುತ್ತಾರೆ. ಶಿವಸ್ವಾ ಮಿರವರು ತೀರಿಹೋಗುವ ಮೊದಲು ಅವರು ಕ್ಯಾನ್ಸರ್ ಖಾಯಿಲೆಯಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಜ್ವರಬಂದು ತೀರಿಹೋದರು ಎಂದು ನುಡಿಯುತ್ತಾರೆ. ಶಿವಸ್ವಾ ಮಿ ರವರು ಬದುಕಿದ್ದಾಗ ಅವರು ಮತ್ತು ನಾವು ಒಟ್ಟುಕುಟುಂಬದಲ್ಲಿ ವಾಸವಿದ್ದೆವು. ಶಿವಸ್ವಾ ಮಿರವರನ್ನು ನನ್ನ ತಂದೆ 2-3 ಬಾರಿ ಮೈಸೂರಿನ ಕಾಮಾಕ್ಷಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಶಿವಸ್ವಾ ಮಿ ರವರಿಗೆ ಹುಷಾರಿಲ್ಲ ಎಂದು ಕರೆದುಕೊಂಡು ಹೋಗಿದ್ದರು. ಮೂರು ಬಾರಿಯೂ ಶಿವಸ್ವಾಮಿರವರಿಗೆ ಜ್ವರ ಎಂದು ಕರೆದುಕೊಂಡು ಹೋಗಿದ್ದರು. ಶಿವಸ್ವಾ ಮಿ ರವರು ಮೈಸೂರಿನ ಕಾಮಾಕ್ಷಿ ಆಸ್ಪತ್ರೆಯಲ್ಲಿ ಎಷ್ಟುಬಾರಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದರು ಎಂದರೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿರಲಿಲ್ಲ, ಆಸ್ಪತ್ರೆಗೆ ಹೋಗಿ ತೋರಿಸಿಕೊಂಡು ಬರುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಜ್ವರದ ಕಾರಣಕ್ಕೆ ಶಿವಸ್ವಾ ಮಿರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ಬಗ್ಗೆ ನನ್ನ ತಂದೆಯ ಬಳಿ ದಾಖಲೆ ಇದೆ. ನನ್ನ ತಂದೆ ತೀರಿಹೋಗಿ 7 ವರ್ಷಗಳಾಗಿವೆ. ಶಿವಸ್ವಾ ಮಿ ರವರು ದಿಃ15/5/1995 ರಂದು ತೀರಿಹೋದರು ಎಂದರೆ ಸರಿ. ಅವರು ಮನೆಯಲ್ಲಿ ತೀರಿಹೋಗಿದ್ದರು. ಶಿವಸ್ವಾ ಮಿ ರವರು ತೀರಿಹೋಗುವ ಸವಯದಲ್ಲಿ 3 ನೇ ವಾದಿಗೆ 8 ವರ್ಷ ವಯಸ್ಸು ಎಂದರೆ ಸರಿ, 4 ನೇ ವಾದಿ ಲೋಕೇಶ ರವರಿಗೆ 6 ವರ್ಷ ವಯಸ್ಸು ಎಂದರೆ ಸರಿ, ಆಗ ಮೊದಲನೇ ವಾದಿ ಒಂದೂವರೆ ವರ್ಷದ ಮಗು ಎಂದರೆ ಸರಿ, 2 ನೇ ವಾದಿ ಶಿವಸ್ವಾ ಮಿ ರವರ ಪತ್ನಿ ಎಂದರೆ ಸರಿ. 2 ನೇ ವಾದಿ ವಿದ್ಯಾವಂತರಲ್ಲ ಎಂದರೆ ಸರಿಯಲ್ಲ. 4 ನೇ ವಾದಿ ಇತ್ತಿಚೆಗೆ ತೀರಿಹೋಗಿದ್ದಾರೆ ಎಂದರೆ ಸರಿ.

ಮೇಲೆ ಹೇಳಿದ ಮೂರೂ ಸ ನಂ. ಆಸ್ತಿಗಳ ಖಾತೆ ಶಿವಸ್ವಾ ಮಿ ರವರು ತೀರಿಹೋಗುವಾಗ ಶಿವಸ್ವಾ ಮಿ ರವರ ಹೆಸರಿನಲೇ ಇತ್ತು ಎಂದರೆ ಸಾಕ್ಷಿಯು ಎರಡು ಸ ನಂ. ಆಸ್ತಿಗಳ ಖಾತೆ ಶಿವಸ್ವಾ ಮಿ ರವರ ಹೆಸರಿನಲ್ಲಿ ಇತ್ತು ಹಾಗು ದಾವಾ ಸ್ವತ್ತಿನ ಖಾತೆ ನನ್ನ

ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಆರ್ ಟಿ ಸಿ 1994-95 ರಲ್ಲಿ ಶಿವಸ್ವಾಮಿ ರವರ ಜೀವಿತ ಕಾಲದಲ್ಲಿ ನನ್ನ ಹೆಸರಿಗೆ ಆಗಿತ್ತು. ಸ ನಂ.9 ಮತ್ತು ಸ ನಂ.267 ರ ಸ್ವತ್ತುಗಳು ಈಗ ವಾದಿಯರ ಹೆಸರಿನಲ್ಲಿ ಇವೆ. ಸದರಿ ಸ್ವತ್ತುಗಳು ವಾದಿಯರ ಹೆಸರಿಗೆ ಆಗಿ 4-5 ವರ್ಷಗಳು ಆಗಿವೆ.

ಮಕ್ಕಳು ದೊಡ್ಡವರಾದನಂತರ ದಾವಾ ಸ್ವತ್ತಿನ ಪಹಣಿ ಪಡೆಯಲು ಹೋದಾಗ ನಿ ಪಿ 3 ಮತ್ತ 4 ರಂತೆ ಆರ್ ಟಿ ಸಿ ನನ್ನ ಹೆಸರಿಗೆ ಬದಲಾವಣೆ ಆದ್ದದ್ದು ಕಂಡುಬಂತು ಎಂದರೆ ಅದಕ್ಕಿಂತ ಮೊದಲೇ ಗೊತ್ತಿತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಆರ್ ಟಿ ಸಿ ಯನ್ನು ನನ್ನ ಹೆಸರಿಗೆ ಬದಲಾವಣೆ ಮಾಡಲು ನಾನು ಏನೇನು ದಾಖಲೆ ಕೊಟ್ಟಿದ್ದೆ ಎಂದರೆ ಸಾಕ್ಷಿಯು ನನ್ನ ತಂದೆ ಇದ್ದಾಗಲೇ 5 ಜನಕ್ಕೂ ಭಾಗವಾಗಿತ್ತು ಎಂದು ನುಡಿಯುತ್ತಾರೆ. ನನ್ನ ತಂದೆ ವಿಭಾಗಪತ್ರ 5 ಜನಕ್ಕೂ ಮಾಡಿದ್ದರು , ಅದನ್ನು ನನ್ನ ವಕೀಲರಿಗೆ ಕೊಟ್ಟಿದ್ದೇನೆ. ನನ್ನ ತಂದೆ ಇದ್ದಾಗಲೇ ವಿಭಾಗವಾಗಿತ್ತು , ಯಾವರ್ಷ ಎಂದು ಗೊತ್ತಿಲ್ಲ. ಆ ಸಂದರ್ಭದಲ್ಲಿ ಶಿವಸ್ವಾಮಿ ಜೀವಂತ ಇದ್ದರು. ವಿಭಾಗವಾದ ಬಗ್ಗೆ ಉಪನೋಂದಣಿ ಕಛೇರಿಯಲ್ಲಿ ನೋಂದಣಿ ಗೊಂಡ ದಾಖಲೆ ಇದೆ. ದಾವಾ ಸ್ವತ್ತಿಗೆ ಸಂಬಂಧಪಟ್ಟ ರುಣಭಾರ ರಾಹಿತ್ಯ ಪತ್ರವನ್ನು ಬ್ಯಾಂಕಿನಿಂದ ಸಾಲ ಪಡೆಯುವಾಗ ಪಡೆದುಕೊಂಡಿದ್ದೇನೆ. ನಾನು 2009-10 ರಲ್ಲಿ ಬ್ಯಾಂಕಿನಿಂದ ಸಾಲ ಪಡೆದಿದ್ದೆ. ನಾನು ಟ್ರ್ಯಾಕ್ಟರ್ ಖರೀದಿಸಲು ಸಾಲ ಪಡೆದುಕೊಂಡಿದ್ದು ಅದು ಇನ್ನೂ ಬಾಕಿ ಇದೆ. ವಾದಿಯರು ನನಗೂ ನನ್ನ ಹೆಂಡತಿಗೂ ನೋಟೀಸ್ ಕೊಟ್ಟಾಗ್ಗ ಬ್ಯಾಂಕಿನವರಿಗೂ ನೋಟೀಸ್ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿ ಡಿ 2 ರಂತೆ ನನ್ನ ಅಣ್ಣ ಶಿವಸ್ವಾಮಿ ರವರ ಸಮ್ಮತಿ ಮೇರೆಗೆ ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಲಾಗಿದೆ ಎಂದು ನಿ ಡಿ 2 ರಲ್ಲಿ ನಮೂದಿಸಿದೆ ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ತಂದೆಯೇ ಮಾಡಿದ್ದು ಎಂದು ನುಡಿಯುತ್ತಾರೆ. ನಿ ಡಿ 4 ಕ್ಕೆ ಸಂಬಧಪಟ್ಟ ಅಸಲು ದಾವೆ ಸಂಖ್ಯೆ 15/2019 ರಲ್ಲಿ ನಾನು ತಕರಾರು ಸಲ್ಲಿಸಿರಲಿಲ್ಲ , ನನ್ನ ಅಕ್ಕ ಸಲ್ಲಿಸಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ನಿ ಡಿ 6 ರಿಂದ 9 ಆರ್ ಟಿ ಸಿ ಗಳು ಶಿವಸ್ವಾಮಿ ರವರ ಮರಣಾನಂತರ

ವಾದಿಯರ ಹೆಸರಿಗೆ ಸ ನಂ.9 ಮತ್ತು 267 ಜಮೀನಿನ ಬಗ್ಗೆ ಆದ ಆರ್ ಟಿ ಸಿ ಗಳು ಎಂದರೆ ಸರಿ.

ದಾವಾ ಸ್ವತ್ತನ್ನು ಮಾರಾಟ ಮಾಡುವ ಬಗ್ಗೆ ನಾನು 4 ನೇ ಪ್ರತಿವಾದಿಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸದರಿ ಸ್ವತ್ತನ್ನು ಆಧಾರ ಮಾಡಿ 4 ನೇ ಪ್ರತಿವಾದಿಯಿಂದ ಸಾಲ ಪಡೆದಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು 6 ವರ್ಷಗಳ ಹಿಂದೆ ಆರೀತಿ ಆಧಾರ ಮಾಡಿ ಸಾಲ ಪಡೆದಿದ್ದೆ. ನಾನು ರೂ.16,00,000/ ಸಾಲ ಪಡೆದಿದ್ದೆ. 4 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರಾಗಿ ಲಿಖಿತ ಹೇಳಿಕೆ ಸಲ್ಲಿಸಿದ್ದಾರ ಎಂದರೆ ನನಗೆ ಗೊತ್ತಿಲ್ಲ. ನಾನು ರೂ.16,00,000/ ಸಾಲ ಪಡೆದ ಬಗ್ಗೆ 2016 ರಲ್ಲಿ ದಾಖಲೆ ಬರೆದುಕೊಟ್ಟಿದ್ದೇನೆ. 2016 ರಲ್ಲಿ ಪಡೆದುಕೊಂಡ ಸಾಲಕ್ಕೆ ಇಲ್ಲಿಯವರೆಗೆ ನಾನು ಬಡ್ಡಿಯನ್ನು ಕಟ್ಟಿಲ್ಲ ಹಾಗು ಅಸಲನ್ನು ತೀರಿಸಿಲ್ಲ. ನಾನು ರೂ.9,00,000/ ಬ್ಯಾಂಕ್ ಸಾಲ ಮರುಪಾವತಿಸಬೇಕು. ನಾನು 4 ನೇ ಪ್ರತಿವಾದಿಗೆ ಮಾಡಿಕೊಟ್ಟ ಆಧಾರ ಪತ್ರದ ಪ್ರತಿಯನ್ನು ನೋಂದಣಿ ಕಛೇರಿಯಿಂದ ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಮಾಡಬಹುದು ಎಂದರೆ ಸಾಕ್ಷಿಯು ಅವರನ್ನು ಕೇಳಿ ತೆಗೆದುಕೊಳ್ಳಬೇಕು ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯದಲ್ಲಿ 2 ಮತ್ತು 4 ನೇ ಪ್ರತಿವಾದಿಗಳ ಸಾಕ್ಷಿ ವಿಚಾರಣೆ ಮಾಡಿಸುತ್ತೇನೆ. ಇದುವರೆಗೂ 3 ಮತ್ತು 4 ನೇ ಪ್ರತಿವಾದಿಗಳು ನನ್ನ ವಿರುದ್ಧ ಕೇಸು ಹಾಕಿಲ್ಲ, ಆದರೆ 3 ನೇ ಪ್ರತಿವಾದಿ ನೋಟೀಸ್ ಕೊಟ್ಟಿದ್ದಾರೆ.

ದಾವಾ ಸ್ವತ್ತು ಎಷ್ಟು ಬೆಲೆಬಾಳುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಮೇಲೆ ನಾನು 2 ಸಾಲ ಪಡೆದುಕೊಂಡಿದ್ದು ಇಲ್ಲಿಯ ವರೆಗೂ ಸಾಲ ತೀರಿಸದ ಕಾರಣ ದಾವಾ ಸ್ವತ್ತಿನ ಬೆಲೆ ಹೆಚ್ಚಾಗುತ್ತದಾ , ಕಡಿಮೆಯಾಗುತ್ತದಾ ಎಂದು ನನಗೆ ಗೊತ್ತಿಲ್ಲ. ದಿಃ28/2/2017 ರಂದು ವಾದಿಯರುನಮಗೆ ನೋಟೀಸ್ ಕೊಟ್ಟ ನಂತರ ನಾನು ಮೇಲೆ

ಹೇಳಿದ ಎರಡು ಸಾಲಗಳನ್ನು ಸೃಷ್ಟಿಸಿಕೊಂಡಿದ್ದೆನೆ ಎಂದರೆ ಸರಿಯಲ್ಲ. ಅದಕ್ಕೂ ಮೊದಲೆ ಪಡೆದುಕೊಂಡಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಉದ್ದೇಶಪೂರ್ವಕವಾಗಿ ತಂದೆ ಮಾಡಿಕೊಟ್ಟರು ಎಂದು ಹೇಳಲಾದ ವಿಭಾಗ ಪತ್ರ ಮತ್ತು 3 ಮತ್ತು 4 ನೇ ಪ್ರತಿವಾದಿಗಳ ಜೊತೆ ಮಾಡಿಕೊಂಡಿರುವ ಸಾಲದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಇದುವರೆಗೂ ಹಾಜರು ಮಾಡಿಲ್ಲ ಎಂದರೆ ಸಾಕ್ಷಿಯು ಎಲ್ಲಾ ವಕೀಲರ ಬಳಿ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ.

ನಾನು ದಾವಾ ಸ್ವತ್ತಿನಲ್ಲಿ ಬಾಳೆ ಬೆಳೆ ಬೆಳೆಯುತ್ತಿದ್ದೇನೆ. ನಾನು 1,500 ಬಾಳೆ ಗಿಡ ನೆಟ್ಟಿದ್ದೇನೆ. ನಾನು ಪಚ್ಚಬಾಳೆ ಬೆಳೆಸಿದ್ದೇನೆ. ನಾನು ವರ್ಷಕ್ಕೆ ಒಂದೇಬೆಳೆ ಬೆಳೆಯುತ್ತಿದ್ದೇನೆ. ನಾನು ದಾವಾ ಸ್ವತ್ತಿನಲ್ಲಿ ಒಂದು ವರ್ಷಕ್ಕೆ ರೂ.70,000/ ಆದಾಯ ಪಡೆಯುತ್ತಿದ್ದೇನೆ. ನನ್ನ ಖರ್ಚೆಲ್ಲಾ ಕಳೆದು ವರ್ಷಕ್ಕೆ 2 ರಿಂದ 3 ಲಕ್ಷ ರೂಪಾಯಿ ಲಾಭ ಪಡೆಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಾಳೆ ಗೊನೆಗಳನ್ನು ನಾನು ತೆಗೆದುಕೊಂಡು ಹೋಗಿ ಮಾರಾಟ ಮಾಡುವುದಿಲ್ಲಾ , ಅವರೇ ಬಂದು ತೆಗೆದುಕೊಂಡು ಹೋಗುತ್ತಾರೆ. ನಿ ಡಿ 2 ನ್ನು ನಾನು ರೆವೆನ್ಯೂ ಅಧಿಕಾರಿಗಳೊಂದಿಗೆ ಸೇರಿಕೊಂಡು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ಬದುಕಿದ್ದಾಗ ಖಾತೆ ಬದಲಾವಣೆ ಮಾಡಲು ಸಮ್ಮತಿ ಕೊಟ್ಟಿರಲಿಲ್ಲ ಎಂದರೆ ಸಾಕ್ಷಿಯು ನನ್ನ ಅಣ್ಣ , ತಂದೆ ಇಬ್ಬರೂ ಒಪ್ಪಿ ಗೆ ಕೊಟ್ಟಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಶಿವಸ್ವಾ ಮಿ ಯಾವರೀತಿ ಒಪ್ಪಿ ಗೆ ಪತ್ರ ಬರೆದುಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ , ನನ್ನ ತಂದೆಯೇ ಮಾಡಿದ್ದು ಎಂದು ಸಾಕ್ಷಿ ನುಡಿಯುತ್ತಾರೆ. ನಿ ಡಿ 1, 2, 3, 5 ದಾಖಲೆಗಳನ್ನು ನನ್ನ ಅಣ್ಣ ಕ್ಯಾನ್ಸರ್ ಖಾಯಿಲೆಯಿಂದ ಆಸ್ಪತ್ರೆಯಲ್ಲಿ ಬಳಲುತ್ತಿದ್ದಾಗ ನಾನು ರೆವೆನ್ಯೂ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸೃಷ್ಟಿಸಿಕೊಂಡಿರುವುದು ಎಂದರೆ ಸರಿಯಲ್ಲ. ವಾದಿಯರಿಗೆ ತೊಂದರೆ ಕೊಡಲು ಸದರಿ ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ವಾದಿಯರೇ ಕಾನೂನುಬದ್ಧ ವಾರಸುದಾರರು ಮತ್ತು ಮಾಲೀಕರು ಎಂದರೆ ಸರಿಯಲ್ಲ. 3 ಮತ್ತು 4 ನೇ ಪ್ರತಿವಾದಿಯರು ವಾದಿಯರಿಗೆ ತೊಂದರೆ ಕೊಡಬೇಕು

ಎಂಬ ಉದ್ದೇಶದಿಂದ ನಾನು ಸಾಲಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿಯು ನನ್ನ ಆಸ್ತಿಯ ಮೇಲೆ ಸಾಲ ಪಡೆದಿದ್ದೇನೆ ಎಂದು ನುಡಿಯುತ್ತಾರೆ. 3 ಮತ್ತು 4 ನೇ ಪ್ರತಿವಾದಿಯರ ಬಳಿ ನಾನು ಮಾಡಿದ ಸಾಲ ವಾದಿಯರ ದಾವಾಸ್ವತ್ತಿನ ಹಕ್ಕಿಗೆ ಅನ್ವಯಿಸುವುದಿಲ್ಲ ಎಂದರೆ ಸಾಕ್ಷಿಯು ನನ್ನ ಜಮೀನಿನ ಮೇಲೆ ಸಾಲ ಪಡೆದಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್

ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.